

ನಟ ಶಾರೂಖ್ ಖಾನ್ ಅವರಿಂದ ದೀಪಾ ಅವರಿಗೆ ಅಭಿನಂದನೆ–ಶುಭಾಶಯ

ಅವರು ಸರಿಯಾಗಿ ತಿನ್ನದೇ ಇದ್ದರೂ ತೊಂದರೆಗಳಿವೆ. ಆಹಾರವನ್ನು ಸಮತೋಲನದಿಂದ ಸೇವಿಸದಿದ್ದರೆ, ಸೊಪ್ಪು ಹೆಚ್ಚಾಗಿ ತಿಂದರೆ, ಹೊಟ್ಟೆ ತೆಳುವಾಗಿ ಬಟ್ಟೆ ಕೊಳಕಾಗುತ್ತದೆ. ಹಾಗೆಂದು ಸೊಪ್ಪಿನಂತಹ ಫೈಬರ್ ಇರುವ ಆಹಾರವನ್ನು ತೆಗೆದುಕೊಳ್ಳದೇ ಇದ್ದರೆ, ಮಲ ಕಟ್ಟಿ ಎನಿಮಾಗೆ ಕರೆದೊಯ್ಯಬೇಕಾಗುತ್ತದೆ. ಎನೀಮಾ ಮೂಲಕ ಮಲವನ್ನು ದೇಹದಿಂದ ಹೊರಕ್ಕೆ ತೆಗೆಯಬೇಕಾಗುತ್ತದೆ. ಇಂತಹ ದೇಹದಲ್ಲಿ ಮತ್ತೆ ಜೀವಿಸುವುದನ್ನು ದೀಪಾ ಕಲಿತರು. ಮಲಮೂತ್ರ ವಿಸರ್ಜನೆಯ ಮೂಲ ತೊಂದರೆಯಿಂದಲೇ ಬಹುತೇಕ ಪ್ಯಾರಪ್ಲೇಜಿಕ್‌ಗಳು ಗೃಹಬಂಧಿಗಳಾಗುತ್ತಾರೆ. ದೀಪಾ ಪ್ಯಾರಪ್ಲೇಜಿಕ್‌ಗಳಿಗೆ ಉದಾಹರಣೆಯಾಗಬಯಸಿದರು.

## ಅರ್ಧ ದೇಹ, ಪೂರ್ಣ ಸ್ಥೈರ್ಯ

ದೀಪಾ ಮತ್ತೆ ಬೈಕ್ ಓಡಿಸಬಯಸಿದರು. ದಿಲ್ಲಿಯ ವಸಂತ್ ಕುಂಜ್‌ನಲ್ಲಿ ಇರುವ 'ಸ್ಪೈನಲ್ ಇಂಜ್ಯುರಿ ಸೆಂಟರ್'ನಲ್ಲಿ ಬಲವರ್ಧನೆಯ ತರಪೇತು ಪಡೆದರು. ಆದರೆ ಪ್ಯಾರಪ್ಲೇಜಿಕ್ ಆಗಿ ಮತ್ತೆ ಡ್ರೈವಿಂಗ್ ಲೈಸೆನ್ಸ್ ಪಡೆಯುವುದೇನೂ ಸುಲಭವಿರಲಿಲ್ಲ. ಪೂರಾ ಒಂದು ವರ್ಷ, ಏಳು ತಿಂಗಳು ಹೋರಾಡಿ, ತಮ್ಮ ಕಾರಿಗೆ ಅಗತ್ಯದ ಮಾರ್ಪಾಡುಗಳನ್ನು ಮಾಡಿಸಿ, ಕಡೆಗೂ ಪರವಾನಗಿ ಪಡೆದರು. ಅದೇ ರೀತಿ 'ಕಸ್ಟಮೈಸ್ಡ್ ಮೋಟಾರ್ ಸೈಕಲ್' ಮಾಡಿಸುವುದೂ ಒಂದು ಸವಾಲಾಗಿತ್ತು. ಇದೀಗ ದೀಪಾ ಕ್ರೀಡೆಗಳಲ್ಲಿ, ರ್‍ಯಾಲಿಗಳಲ್ಲಿ ಭಾಗವಹಿಸತೊಡಗಿದರು. ದೀಪಾ ಮಲ್ಲಿಕ್ ಭಾರತದಲ್ಲಿ ಕ್ರೀಡಾಲೋಕಕ್ಕೆ ಸೇರ್ಪಡೆಯಾದ ಮೊಟ್ ಮೊದಲ ಪ್ಯಾರಪ್ಲೇಜಿಕ್ ಮಹಿಳೆ!



ಅಣ್ಣನೊಡನೆ ಪುಟ್ಟ ದೀಪಾ

2006ರಲ್ಲಿ ಕೌಲಾಲಂಪುರದಲ್ಲಿ ನಡೆದ 'ಫಾರ್ ಈಸ್ಟ್ ಅಂಡ್ ಸೌತ್ ಪ್ಯಾಸಿಫಿಕ್ ಗೇಮ್ಸ್'ನಲ್ಲಿ ಈಜಿ, ಬೆಳ್ಳಿಯ ಪದಕವನ್ನು ಪಡೆದರು. ಈಜನ್ನು ಮುಂದುವರಿಸುವುದು ಅವರ ಆಸೆಯಾಗಿದ್ದರೂ, ತೊಂದರೆಗಳಿದ್ದವು. ನಮ್ಮ ದೇಶದಲ್ಲಿ ಬಿಸಿ ಮಾಡಿದ ಈಜುವ ಕೊಳಗಳು ಇಲ್ಲ. ಆಕೆ ಇರುವ ಸ್ಥಿತಿಯಿಂದಾಗಿ, ಚಳಿಗಾಲದಲ್ಲಿ ತಣ್ಣನೆಯ ನೀರಿನಲ್ಲಿ ಈಜುವುದರಿಂದ ಆಕೆಗೆ ಹೃದಯಸ್ತಂಭನವಾಗುವ ಸಾಧ್ಯತೆ ಹೆಚ್ಚಿದೆ. ಹಾಗಾಗಿ ಕೊನೆಯ ಬಾರಿ ಒಂದು ದಾಖಲೆ ಸ್ಥಾಪಿಸಿ ಈಜುವುದನ್ನು ಬಿಟ್ಟು ಬಿಡಲು ದೀಪಾ ನಿರ್ಧರಿಸಿದರು. 2008ರಲ್ಲಿ, ನಾಲ್ಕು ತಿಂಗಳ ತೀವ್ರ ತಯಾರಿಯ ನಂತರ, ಯಮುನಾ ನದಿಯ ಹರಿವಿಗೆ ವಿರುದ್ಧವಾಗಿ ಒಂದು ಕಿಲೋಮೀಟರ್ ಈಜಿ 'ಲಿಮ್ಕಾ ಬುಕ್ ಆಫ್ ರೆಕಾರ್ಡ್'ನಲ್ಲಿ ಸ್ಥಾನ ಪಡೆದರು.

2009ರಲ್ಲಿ ವಿಶೇಷವಾಗಿ ಮಾರ್ಪಡಿಸಲಾದ ಬೈಕನ್ನು 58 ಕಿಲೋಮೀಟರ್ ಓಡಿಸಿ ಮತ್ತೆ ದಾಖಲೆ ಸ್ಥಾಪಿಸಿದರು. ಇದೇ ವರ್ಷ, ಹನ್ನೊಂದನೇ 'ರೈಡ್ ದಿ ಹಿಮಾಲಯ' ಜಗತ್ತಿನ ಅತಿ ಎತ್ತರದ ಅತ್ಯಂತ ಕಠಿಣ ಮೋಟಾರ್ ರ್‍ಯಾಲಿಯಲ್ಲಿ 40 ವರ್ಷ ವಯಸ್ಸಿನ ದೀಪಾ ಏಕೈಕ ದಿವ್ಯಾಂಗರಾಗಿ ಭಾಗವಹಿಸಿದರು. ಬೆನ್ನಹುರಿಯ ಶಸ್ತ್ರಕ್ರಿಯೆ ಆದ, ಮಲಮೂತ್ರಗಳ ಸಹಜ ವಿಸರ್ಜನೆ ಸಾಧ್ಯವಿಲ್ಲದೆ, ಅವೆಲ್ಲವನ್ನೂ ಸೂಕ್ಷ್ಮವಾಗಿ ನಿರ್ವಹಿಸಬೇಕಾದ ಸ್ಥಿತಿಯಲ್ಲಿ ಈಕೆ ದೀರ್ಘವಾದ, ಅತ್ಯಂತ ಶ್ರಮದ, ತೀವ್ರ ಚಳಿಯನ್ನು ಎದುರಿಸಬೇಕಾದ ರ್‍ಯಾಲಿಗೆ ತಯಾರಾದರು. ಅವರು ಈ ರ್‍ಯಾಲಿಯಲ್ಲಿ ರಾಕೇಶ್ ದೀವಾನ್ ಅವರಿಗೆ ಜೊತೆಯಾಗಿ, 'ನ್ಯಾವಿಗೇಟರ್' ಆಗಿ ಭಾಗವಹಿಸಿದರು. ತಣ್ಣನೆಯ ಮರುಭೂಮಿಯ ಅತ್ಯಂತ ಕಷ್ಟದ ಹಾದಿಯ ರ್‍ಯಾಲಿ ಆರಂಭವಾಯಿತು. ನೆರೆದ ಜನರ ಮುಖದಲ್ಲಿ ಕಂಡ ಅಚ್ಚರಿ ದೀಪಾ ಅವರಿಗೆ ಖುಷಿಕೊಟ್ಟಿತ್ತು. ಅವರು ಜಗತ್ತಿಗೆ ಸಾಬೀತುಮಾಡುತ್ತಿದ್ದರು 'ಡಿಸೇಬಿಲಿಟಿ ಮನಸ್ಸಿನಲ್ಲಿದೆ, ಮಿದುಳಿನಲ್ಲಿದೆ, ದೇಹದಲ್ಲಿ ಅಲ್ಲ' ಎಂದು.

ಅಕ್ಟೋಬರ್ 7ರಂದು ರ್‍ಯಾಲಿ ಆರಂಭವಾಯಿತು. ಎಂಟು ದಿನಗಳು, ದುರ್ಗಮ ರಸ್ತೆಯಲ್ಲಿ 1700 ಕಿಲೋಮೀಟರ್ ಪಯಣ. ಮೈನಸ್‌ಗೆ ಇಳಿದ ತಾಪಮಾನದ ಕೊರೆವ ಚಳಿಯನ್ನು, 18 ಸಾವಿರ ಅಡಿ ಎತ್ತರದಲ್ಲಿ ಆಮ್ಲಜನಕ ವಿರಳವಾದ ಪರಿಸರವನ್ನು ದೀಪಾ ದಿಟ್ಟವಾಗಿ ಎದುರಿಸಿದರು. ತೀರಾ ಪ್ರಯಾಸದ ಈ ಪಯಣ ಕೂಡಾ ಅವರನ್ನು ಸುಸ್ತು ಮಾಡಲಿಲ್ಲ. ಅವರು ಅದೆಷ್ಟು ಉತ್ಸಾಹದಿಂದ ಹೊರಟಿದ್ದರು ಎಂದರೆ, ಅವರಿಗೆ ಆಯಾಸವೇ ಅನಿಸಲಿಲ್ಲ. ಆದರೆ ಕೊನೆಯ ಹಂತದಲ್ಲಿ ಅವರ ಕಾರು ಅಪಘಾತಕ್ಕೆ ಈಡಾಗಿ, ರೇಡಿಯೇಟರ್ ಸೀಳಿ ಹೋಗಿ, ಗಾಡಿ ಕೆಟ್ಟಿತು. ಉಳಿದ ಹಾದಿಯನ್ನು,